**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ರವರ ನ್ಯಾಯಾಲಯ, ವಿರಾಜಪೇಟೆ.**

**ಸಿ.ಸಿ.651/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಕೆ. ಎ. ನೆಹರು | ಫ್ರಾಸಾ–5 |
| ತಂದೆಯ ಹೆಸರು | : ಅಪ್ಪಚ್ಚು ಕೆ.ಎ. | ಚಾಸಾ–10 |
| ವಯಸ್ಸು | : 59 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಡಿ.ಸಿ.ಎಫ್. | ದಿಃ .1507.2026. |
| ವಾಸಸ್ಥಳ | : ಮಡಿಕೇರಿ ವನ್ಯ ಜೀವಿ ವಿಭಾಗ | |

**:ಮುಖ್ಯ ವಿಚಾರಣೆ: ಫ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿಃ 04.07.2022 ರಿಂದ 01.08.2024 ರ ವರಗೂ ವಿರಾಜಪೇಟೆ ಉಪವಿಭಾಗದ ಸಹಾಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 04.07.2022 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆ ಸಂಬಂಧ ಸ್ವೀಕರಿಸಿಕೊಂಡು ದಿನಾಂಕ 13.07.2022 ರಂದು ಚಾಸಾ9 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ 11.10.2022 ರಂದು ಆರೋಪಿತರು ವಿಚಾರಣೆ ಮಾಡಿ, ಅವರ ಸ್ವಇಚ್ಛಾ ಹೇಳಿಕೆ ಮತ್ತು ಚಾಸಾ–1, 4, 5 ಮತ್ತು 7 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ 21.10.2022 ರಂದು ಚಾಸಾ3 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ 09.11.2022 ರಂದು ಚಾಸಾ8 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ 07.03.2023 ರಂದು ಚಾಸಾ2 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ 13.07.2023 ರಂದು ಚಾಸಾ9 ರವರಿಂದ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾಗಿದ್ದ ಮಾಂಸದ ಸಂಬಂಧ ದೃಢೀಕರಣ ಪತ್ರವನ್ನು ಪಡೆದುಕೊಂಡು, ದಿನಾಂಕ 23.06.2023 ರಂದು ಆರೋಪಿತರ ವಿರುದ್ಧ ಅಂತಿಮ ದೂರನ್ನು ಸಲ್ಲಿಸಿಕೊಂಡಿರುತ್ತೇನೆ.

3. ಸಾಕ್ಷಿಯು ದಿನಾಂಕ 13.07.2023 ರ ಮನವಿ ಪತ್ರ ಮತ್ತು ವೈದ್ಯಕೀಯ ವರದಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ8 ಮತ್ತು 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ವಿ.ಜಿ.ಆರ್ ವಕೀಲರಿಂದ ಃ**

ಚಾಸಾ1 ರಿಂದ 8 ರವರು ನಮ್ಮ ಇಲಾಖಾ ಸಿಬ್ಬಂದಿಗಳಾದ ಕಾರಣ ಅವರ ಹೇಳಿಕೆಯನ್ನು ಪ್ರಕರಣಕ್ಕೆ ಉಪಯೋಗವಾಗುವ ರೀತಿಯಲ್ಲಿ ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮಾಂಸದ ಮಾದರಿಯನ್ನು

ಪರೀಕ್ಷೆಗೆಂದು ನಾನೇ ಕಳುಹಿಸಿದ್ದೆ. ಪ್ರಕರಣದ ಸಂಬಂಧ ಹಸಿ ಮಾಂಸ ಸಿಕ್ಕಿರುವುದಿಲ್ಲ. ಮಾಂಸವನ್ನು ನಾಶ ಮಾಡುವ ಪೂರ್ವದಲ್ಲಿ ಮಾದರಿಗಾಗಿ ತೆಗೆದಿದ್ದೆವು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ8 ಮತ್ತು 9ನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಚಾಸಾ9 ರವರು ಅರಣ್ಯ ಇಲಾಖೆಯ ಸಿಬ್ಬಂದಿ ಎಂದರೆ ಸರಿ. ಈ ಕಾರಣ ಅವರಿಂದ ಪ್ರಕರಣಕ್ಕೆ ಉಪಯೋಗವಾಗುವ ರೀತಿಯಲ್ಲಿ ದೃಢೀಕರಣ ಪಡೆದಿದ್ದೇವೆ ಎಂದರೆ ಸರಿಯಲ್ಲ. ಬಂದೂಕು ಮತ್ತು ಮಾದರಿ ಮಾಂಸವನ್ನು FSL ಗೆ ಕಳುಹಿಸಿಕೊಟ್ಟಿಲ್ಲ ಹಾಗೂ ಆ ರೀತಿ ಕಳುಹಿಸಿಕೊಡಲು ತೊಂದರೆ ಇರಲಿಲ್ಲ. ನಾನು ಸರಿಯಾದ ರೀತಿಯಲ್ಲಿ ತನಿಖೆ ಮಾಡದೇ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ವಿರಾಜಪೇಟೆ.